# India MRO Aerospace & Defence Expo begins

| | | | | | |
|---|---|---|---|---|---|
| Pub Date: | 02 Dec 2015 | Publication: | Vijaya Karnataka | Edition: | Bangalore |
| Journalist: | Bureau | Language: | Kannada | Page No.: | 4 |
| CCM: | 76.91 | MAV: | 253812.56 | Circulation | 257000 |



‘ಇಂಡಿಯಾ ಎಂಆರ್‌ಒ ಏರೋಸ್ಪೇಸ್ ಮತ್ತು ಡಿಫೆನ್ಸ್ ಎಕ್ಸ್‌ಪೋ-2015’ಗೆ ಚಾಲನೆ

# ವೈಮಾಂತರಿಕ್ಷ ಕ್ಷೇತ್ರ ಬೆಳವಣಿಗೆಗೆ ಪ್ರತ್ಯೇಕ ವಿವಿ ಸ್ಥಾಪನೆಗೆ ಚಿಂತನೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ವೈಮಾಂತರಿಕ್ಷ ಕ್ಷೇತ್ರದ ಬೆಳವಣಿಗೆಗಾಗಿ ವಿಶೇಷ ಆರ್ಥಿಕ ವಲಯ ಸ್ಥಾಪನೆಗೆ ಮುಂದಾಗಿರುವ ಸರಕಾರ, ಈ ಕ್ಷೇತ್ರದಲ್ಲಿ ಸಂಶೋಧನೆ ವಿಸ್ತರಣೆಗೆ ಪ್ರತ್ಯೇಕ ವೈಮಾನಿಕ ವಿಶ್ವವಿದ್ಯಾಲಯ ಸ್ಥಾಪನೆಗೂ ಚಿಂತನೆ ನಡೆಸಿದೆ ಎಂದು ಮೂಲಸೌಕರ್ಯ ಸಚಿವ ಆರ್. ರೋಷನ್‌ಬೇಗ್ ತಿಳಿಸಿದ್ದಾರೆ.

ಕೇಂದ್ರದ ಪರಿಷ್ಕೃತ ರಾಷ್ಟ್ರೀಯ ನಾಗರಿಕ ವಿಮಾನಯಾನ ನೀತಿಯ ಕರಡು ಪ್ರತಿಗೆ ಪೂರಕವಾಗಿ ಎಂಎಂ ಆಕ್ಟೀವ್ ಸೈನ್ಸ್-ಟೆಕ್ ಕಮ್ಯುನಿಕೇಷನ್ಸ್ ಮತ್ತು ಕ್ಯಾನೆಸ್ ಇಂಟರ್‌ನ್ಯಾಷನಲ್, ಎಂಆರ್‌ಒ ಅಸೋಸಿಯೇಷನ್ ಆಫ್ ಇಂಡಿಯಾ ಸಹಭಾಗಿತ್ವದಲ್ಲಿ ನಗರದ ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಂಡಿರುವ ‘ಇಂಡಿಯಾ ಎಂಆರ್‌ಒ ಏರೋಸ್ಪೇಸ್ ಮತ್ತು ಡಿಫೆನ್ಸ್ ಎಕ್ಸ್‌ಪೋ-2015’ ಉದ್ಘಾಟಿಸಿ ಅವರು ಮಾತನಾಡಿದರು.

‘‘ಬೆಂಗಳೂರು ರಾಷ್ಟ್ರದ ವೈಮಾಂತರಿಕ್ಷ ಕ್ಷೇತ್ರದ ರಾಜಧಾನಿ ಎನಿಸಿಕೊಂಡಿದೆ. ಎಚ್‌ಎಎಲ್ ಸೇರಿದಂತೆ ವೈಮಾಂತರಿಕ್ಷ ಕ್ಷೇತ್ರಕ್ಕೆ ಸಂಬಂಧಿಸಿದ ಬಿಇಎಲ್, ಇಸ್ರೋ ಸೇರಿದಂತೆ ಮುಂತಾದ ಬಲಾಢ್ಯ ಸಂಸ್ಥೆಗಳು ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಕ್ಷೇತ್ರದ ಬೆಂಗಳೂರಿನ ಈ ಹೆಗ್ಗಳಿಕೆಯನ್ನು ಉತ್ತೇಜಿಸಿ ಜಾಗತಿಕ ಮಟ್ಟದ ವೈಮಾಂತರಿಕ್ಷ ಉದ್ಯಮವನ್ನು ಇಲ್ಲಿಗೆ ಮತ್ತಷ್ಟು ಸೆಳೆಯಲು ರಾಜ್ಯ ಸರಕಾರ ಅನೇಕ ಹೆಜ್ಜೆಗಳನ್ನು ಇಟ್ಟಿದೆ. ಅದರ ಭಾಗವಾಗಿ ದೇಶದಲ್ಲಿ ಮೊದಲ ಬಾರಿಗೆ ಏರೋಸ್ಪೇಸ್ ನೀತಿ ಜಾರಿಗೆ ತರಲಾಗಿದೆ. ಅಲ್ಲದೇ, ದೇವನಹಳ್ಳಿ ಬಳಿ ಏರೋಸ್ಪೇಸ್ ವಿಶೇಷ ಆರ್ಥಿಕ ವಲಯ ಸ್ಥಾಪನೆಗೆ ಒಂದು ಸಾವಿರ ಎಕರೆ ಜಮೀನು ಮೀಸಲಿಡಲಾಗಿದೆ. ಈ ಕ್ಷೇತ್ರದ ಸಂಶೋಧನೆ ವಿಸ್ತರಿಸಲು ಏರೋಸ್ಪೇಸ್ ವಿವಿ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುತ್ತಿದೆ,’’ ಎಂದು ಅವರು ಹೇಳಿದರು.

‘‘ರಾಜ್ಯದಲ್ಲಿ ವೈಮಾಂತರಿಕ್ಷ ಕೈಗಾರಿಕೆಗಳನ್ನು ಸ್ಥಾಪನೆಗೆ ಪಿಸಲು ಪೂರಕ ವಾತಾವರಣ ಸೃಷ್ಟಿಸಲು ಸರಕಾರ ಬದ್ಧವಾಗಿದೆ. ಪ್ರಸ್ತಾವನೆಗಳ ತ್ವರಿತ ವಿಲೇವಾರಿಗೆ ಏಕಗವಾಕ್ಷಿ ಪದ್ಧತಿ ಜಾರಿಗೆ ತರಲಾಗಿದೆ. ಅಲ್ಲದೇ 50 ಕೋಟಿ ರೂ. ಮೇಲ್ಪಟ್ಟ ಬಂಡವಾಳ ಹೂಡಿಕೆಯ ಯೋಜನೆಗಳ ಪ್ರಸ್ತಾವನೆಗಳನ್ನು ಮುಖ್ಯಮಂತ್ರಿ ನೇತೃತ್ವದ ಉನ್ನತಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಅನುಮೋದನೆ ನೀಡುತ್ತದೆ. ಕರ್ನಾಟಕದಲ್ಲಿನ ನೈಸರ್ಗಿಕ ಮತ್ತು ರಾಜ್ಯ ಸರಕಾರದ ಸವಲತ್ತುಗಳನ್ನು ಬಳಸಿಕೊಂಡು ವೈಮಾಂತರಿಕ್ಷ ಕ್ಷೇತ್ರದಲ್ಲಿ ಬಂಡವಾಳ ಹೂಡಲು ಉದ್ಯಮಿಗಳು ಮುಂದೆ ಬರಬೇಕು,’’ ಎಂದು ಕೋರಿದರು.

ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ವಂದಿತಾ ಶರ್ಮಾ, ಎಚ್‌ಎಎಲ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕಾವೇರಿ ರಂಗನಾಥನ್, ಮ್ಯಾಕ್ಸ್ ಎಂಆರ್‌ಒ ಸರ್ವೀಸ್ ಅಧ್ಯಕ್ಷ ಭರತ್ ಮಲ್ಕಾನಿ, ಕ್ಯಾನೆಸ್ ಅಧ್ಯಕ್ಷ ಡಾ. ಮಿಲಿಂದ್ ಪಿಂಪ್ರಿಕರ್, ಎಂಎಂ ಆ್ಯಕ್ಟಿವ್ ಕಮ್ಯುನಿಕೇಷನ್ ವ್ಯವಸ್ಥಾಪಕ ನಿರ್ದೇಶಕ ಜಗದೀಶ್ ಪಾಟನಾಕರ್, ಎಂಆರ್‌ಒ ಅಸೋಸಿಯೇಷನ್ ಆಫ್ ಇಂಡಿಯಾದ ಪ್ರಧಾನ ಕಾರ್ಯದರ್ಶಿ ಪುಲಕ್ ಸೇನ್ ಮತ್ತಿತರರು ಇದ್ದರು.

ಎರಡು ದಿನಗಳ ಈ ಪ್ರದರ್ಶನದಲ್ಲಿ ಏರ್ ಇಂಡಿಯಾ ಎಂಜಿನಿಯರಿಂಗ್ ಸರ್ವೀಸ್ ಲಿಮಿಟೆಡ್, ಹಿಂದೂಸ್ತಾನ್ ಏರೋನ್ಯಾಟಿಕ್ಸ್ ಲಿಮಿಟೆಡ್, ಮ್ಯಾಕ್ಸ್ ಎಂಆರ್‌ಒ, ಇಂಡೊಕಾಪ್ಟರ್, ಹನಿವೆಲ್, ಏರ್‌ಬಸ್, ಸ್ನೆಕ್ಮ ಸೇರಿದಂತೆ ಅನೇಕ ಕಂಪನಿಗಳು ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಲಿವೆ.




ನಗರದ ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಂಡಿರುವ ‘ಇಂಡಿಯಾ ಎಂಆರ್‌ಒ ಏರೋಸ್ಪೇಸ್ ಮತ್ತು ಡಿಫೆನ್ಸ್ ಎಕ್ಸ್‌ಪೋ-2015’ ಉದ್ಘಾಟಿಸಿದ ನಂತರ ಸಚಿವ ಆರ್. ರೋಷನ್‌ಬೇಗ್ ವಿಮಾನ ಮಾದರಿಯನ್ನು ಕುತೂಹಲದಿಂದ ವೀಕ್ಷಿಸಿದರು. ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ವಂದಿತಾ ಶರ್ಮಾ ಉಪಸ್ಥಿತರಿದ್ದರು.